◆ ಸಿನಿಮಾ ನಿಮ್ಮನ್ನು ಕರೆದಿದ್ದು ಹೇಗೆ?

ಸಿ. ಚಂದ್ರಶೇಖರ್ ಎನ್ನುವ ನಿರ್ದೇಶಕರು 'ಹುಲಿ ಬಂತು ಹುಲಿ' ಮಾಡಿದ್ದರು. ಅವರೇ ನನ್ನ 'ದೊಡ್ಮನೆ ಎಸ್ಟೇಟ್' ಕತೆಯನ್ನು ಆಧರಿಸಿದ ಮೊದಲ ಸಿನಿಮಾ ನಿರ್ದೇಶಿಸಿದ್ದು. ಅದಕ್ಕೆ ಎಚ್.ಎಸ್. ವೆಂಕಟೇಶಮೂರ್ತಿ, ಎನ್.ಎಸ್. ರಾವ್ ಸಂಭಾಷಣೆ ಬರೆದಿದ್ದರು. ಚಿಕ್ಕಮಗಳೂರಿಗೆ ಚಿತ್ರೀಕರಣಕ್ಕೆ ಭೀಮರಾವ್ ಎಂಬ ನಿರ್ಮಾಪಕರು ಕರೆದರು. ನಾನೂ ಹೋದೆ. ನಾನು ನಿರ್ದೇಶಕರ ಪಕ್ಕದಲ್ಲಿ ಕೂತರೆ ಅವರು ಎದ್ದುಹೋಗುತ್ತಿದ್ದರು. ಸ್ಕ್ರೀನ್‌ಪ್ಲೇ ಬಗೆಗೆ ಚರ್ಚಿಸಲು ಮುಂದಾದೆ. 'ನಿಮಗೇನ್ರೀ ಗೊತ್ತು ಸ್ಕ್ರೀನ್‌ಪ್ಲೇ, ಬದನೇಕಾಯಿ' ಎಂದುಬಿಟ್ಟರು. ಅವರಿಗೆ ಅದಾಗಲೇ ರಾಜ್ಯ ಪ್ರಶಸ್ತಿ ಬಂದಿತ್ತು. ಬಹುಶಃ ಈ ಸಿನಿಮಾದವರೇ ಹೀಗೆ ಎಂದುಕೊಂಡು ನಾನು ಆಗ ಸುಮ್ಮನಾದೆ. ಮಾನು, ಪ್ರಮೀಳಾ ಜೋಷಾಯ್ ಆ ಸಿನಿಮಾದಲ್ಲಿ ಅಭಿನಯಿಸಿದ್ದರು. ಮಾನು ಕತೆ ಬರೆಯುತ್ತಿದ್ದರು. ನನ್ನನ್ನು ಓದಿಕೊಂಡಿದ್ದರು. ಹೀಗಾಗಿ ಚೆನ್ನಾಗಿಯೇ ಮಾತನಾಡಿಸಿದರು. ಆದರೆ, ನಿರ್ದೇಶಕರ ಧೋರಣೆ ಕಂಡು ಸಿನಿಮಾಗೂ ನನಗೂ ಆಗಿಬರುವುದಿಲ್ಲ ಎಂದುಕೊಂಡೆ.

ಆ ಕಾಲಘಟ್ಟದಲ್ಲಿ ಶಿವರಾಮ ಕಾರಂತ, ಅನಂತಮೂರ್ತಿ ತರಹದವರ ಕೃತಿಗಳನ್ನು ಆಧರಿಸಿದ ಸಿನಿಮಾಗಳು ಬರುತ್ತಿದ್ದವು. ಹಾಗಿರುವಾಗ ನನ್ನ ಆರನೆಯದೋ ಏಳನೆಯದೋ ಕತೆ ಸಿನಿಮಾ ಆಗಿದ್ದು ಅಚ್ಚರಿಯಾಗಿತ್ತು. ಏನೋ ಪ್ರಯೋಗ ಎಂದು ಆಗ ಹೇಳಿದ್ದರು. ಕತೆಗಳೇ ಪ್ರಕಟವಾಗುವುದು ಕಷ್ಟವಿದ್ದ ಕಾಲದಲ್ಲಿ ಕತೆ ಸಿನಿಮಾ ಆಗಿದ್ದನ್ನು ನೋಡಿ ಬೆರಗುಗೊಂಡಿದ್ದೆ. ಇನ್ನು ಸಿನಿಮಾ ನನ್ನಿಂದ ದೂರ ಅಂದುಕೊಂಡು ಸುಮ್ಮನಿದ್ದೆ.

'ಪರಾಜಿತ' ಎಂಬ ನನ್ನ ಕಾದಂಬರಿ ಪ್ರಕಟವಾಗಿತ್ತು. ಅದನ್ನು ನಿರ್ದೇಶಕ ಸಿದ್ದಲಿಂಗಯ್ಯ ಓದಿದ್ದರು. ನನ್ನನ್ನು ಕರೆಸಿದರು.

◆ ಸಿದ್ದಲಿಂಗಯ್ಯ ಅವರೊಟ್ಟಿಗಿನ ಮೊದಲ ಭೇಟಿಯ ಅನುಭವವನ್ನು ವಿವರವಾಗಿ ಹೇಳಿ.

ಸಿದ್ದಲಿಂಗಯ್ಯ ಅವರನ್ನು ಭೇಟಿಯಾಗುವ ಹೊತ್ತಿಗೆ ನಾನು ಐವತ್ತು ಅರವತ್ತು ಕತೆಗಳನ್ನು ಬರೆದಿದ್ದೆ. ಸಿನಿಮಾಗೆ ಹೊಂದುವ ಕತೆಯ ಹುಡುಕಾಟದಲ್ಲಿ ಅವರಿದ್ದರು. ಒಂದೊಂದೇ ಕತೆಯನ್ನು ಕೇಳತೊಡಗಿದರು. ಸತತವಾಗಿ ಒಂದೇ ದಿನ ಐದು ಗಂಟೆಗಳ ಕಾಲ ಅವರಿಗೆ ನಾನು ಬರೆದಿದ್ದ ಕತೆಗಳನ್ನು ಹೇಳಿದೆ. 'ಮಯೂರ' ಮಾಸಪತ್ರಿಕೆಯಲ್ಲಿ ಆಗ 'ನಾಗರ ಬಯಲು' ಎಂಬ ಕತೆ ಪ್ರಕಟವಾಗಿತ್ತು. ಅದು ಸಿನಿಮಾ ಆಗಲು ಲಾಯಕ್ಕೆನ್ನಿಸಿ, ಉತ್ಸಾಹದಿಂದಲೇ ಹೇಳಿದೆ. ಅದನ್ನು ಕೇಳಿದ ಅವರು, 'ರೇಪ್ ಆಗಿಬಿಡುತ್ತಲ್ಲಪ್ಪ ಅವಳದ್ದು' ಎಂದರು. ಹೀಗೇ, ಅವರಿಗೆ ಎಷ್ಟೋ ಕತೆಗಳನ್ನು ಸಿನಿಮಾ ಮಾಡಬಹುದು ಎನಿಸಲಿಲ್ಲ.

ಅದೇ ಸಮಯದಲ್ಲಿ 'ಮದಕರಿನಾಯಕ' ಬರೆಯಲುತೊಡಗಿದ್ದ ನಾನು, ಆಗ ಸಾಕಷ್ಟು ವಿವಾದಕ್ಕೆ ಗುರಿಯಾಗಿದ್ದೆ. ತರಾಸು ಅವರ ಅಭಿಮಾನಿಗಳು ಅದನ್ನು ಬರೆಯಕೂಡದು ಎಂದು ಒತ್ತಡ ಹೇರಿದ್ದರು. ಚಿತ್ರದುರ್ಗದ ಕರುವಿನಕಟ್ಟೆಯ ಗರಡಿ ಹುಡುಗರು ಬಂದು ಧಮಕಿ ಹಾಕಿದ್ದರು. ಆ ಕತೆಯನ್ನು ಸಿದ್ದಲಿಂಗಯ್ಯ ಕೇಳಿದರು. ಅದನ್ನು ನಾನು ಹೇಳುವಾಗಲೇ ಅವರು ಆಗೀಗ ಭಾವುಕರಾಗಿ ಅಳಲಾರಂಭಿಸಿದರು. ಪೂರ್ತಿ ಕತೆಯನ್ನು ಕೇಳಿದ ಮೇಲೆ ಅವರಿಗೆ ಅದು ತುಂಬಾ ಹಿಡಿಸಿತು. ಇದನ್ನೇ ಸಿನಿಮಾ ಮಾಡೋಣ ಎಂದು ಅದೇ ಸಂಜೆ ಅಗ್ರಿಮೆಂಟ್ ಮಾಡಿಕೊಂಡರು. ಅವರ ಜತೆಗೆ ವೈದಿ ಎನ್ನುವ ಅಸಿಸ್ಟೆಂಟ್ ಇದ್ದರು. 'ಪರಾಜಿತ' ಕೃತಿಯ ವಸ್ತುವಿನಲ್ಲಿ ಇದ್ದ ಸಸ್ಪೆನ್ಸ್ ಸಿನಿಮಾಗೆ ಹೊಂದುವುದಿಲ್ಲ ಎಂದು ಅವರು ವಾದಿಸಿದರು. ಸಿದ್ದಲಿಂಗಯ್ಯ 'ಪರಾಜಿತ' ಕತೆಯನ್ನೂ ಕೇಳಿದರು. ಅದನ್ನು ಸಿನಿಮಾ ಮಾಡಿ ತೋರಿಸುವುದಾಗಿ ಅಲ್ಲಿಯೇ ವೈದಿ ಅವರಿಗೆ ಸವಾಲು ಹಾಕಿದರು.